೭.	ಚೌಕಾಂಬ ಸಂಸ್ಕೃತ ವಾರಣಾಸಿ ಮತ್ತು ಮೈಸೂರು ವಿಶ್ವವಿದ್ಯಾನಿಲಯ	—	೪೪೬–೦೦ ೬೮೦–೦೦ ೮–೨೩ ೪೩–೯೭
೮.	ಆರ್.ಇ.ಐ. ಸಿಯಸ್ ಲಿಮಿಟೆಡ್, ಕನಕಪುರ ಇತರೆ	—	೧೭೮–೨೦ ೪೬–೫೦ ೧೭–೭೫ ೧೫–೦೦ ೨೫–೦೦
	ಒಟ್ಟು	—	೮೬,೯೯೨–೦೮

ಉ) ಬಂದಿದೆ. ೨೧ನೇ ಮಾರ್ಚ್ ೧೯೭೮.

ಊ) ಇಲ್ಲ ಉದ್ಭವಿಸುವುದಿಲ್ಲ.

ಶ್ರೀ ಹೆಚ್.ಜಿ. ಚಿನ್ನಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಯಾವುದಾದರೊಂದು ಫರ್ಮ್‌ಗೆ ಉಪಕರಣಗಳು ಬರದೆ ಇದ್ದರೂ ಹೆಚ್ಚು ಹಣವನ್ನು ಕೊಟ್ಟಿದ್ದಾರೆಯೇ ಎಂದು ಮಾನ್ಯ ಮಂತ್ರಿಗಳನ್ನು ಪ್ರಶ್ನೆ ಕೇಳಿದ್ದಕ್ಕೆ ಇಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಆದರೆ ಇದರ ಬಗ್ಗೆ ನಾನು ಸರ್ಕಾರಕ್ಕೆ ಮಾಹಿತಿಯನ್ನು ಒದಗಿಸಿಕೊಟ್ಟರೆ ಅಂಥವರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುತ್ತಾರೆಯೇ ?

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಮಾಹಿತಿಯನ್ನು ಒದಗಿಸಿಕೊಟ್ಟರೆ ಖಂಡಿತವಾಗಿ ಅಂಥವರ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಚಿಂತಾಮಣಿ ತಾಲ್ಲೂಕಿಗೆ ರಾಷ್ಟ್ರೀಯ ಗ್ರಾಮಾಂತರ ನೀರು ಪೂರೈಕೆ ಯೋಜನೆಯಡಿ ಮಂಜೂರಾತಿ

೨೯೬ (೧೬೫) ಶ್ರೀ ಚೌಡರೆಡ್ಡಿ (ಚಿಂತಾಮಣಿ).—ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಚಿಂತಾಮಣಿ ತಾಲ್ಲೂಕಿನಲ್ಲಿ ಯಾವ ಯಾವ ಗ್ರಾಮಗಳಿಗೆ ಯಾವ ಯಾವ ದಿನಾಂಕಗಳಂದು ರಾಷ್ಟ್ರೀಯ ಗ್ರಾಮಾಂತರ ನೀರು ಪೂರೈಕೆ ಯೋಜನೆ ಮಂಜೂರಾಗಿದೆ; (ಅಂಕಿ ಅಂಶಗಳೊಂದಿಗೆ ಮಂಜೂರಾದ ದಿನಾಂಕವನ್ನು ತಿಳಿಸುವುದು)

ಆ) ಯಾವ ಯಾವ ಗ್ರಾಮಗಳಲ್ಲಿ ಈ ಯೋಜನೆ ಫಲಕಾರಿಯಾಗಿದೆ ಮತ್ತು ಇತರೆ ಗ್ರಾಮಗಳಲ್ಲಿ ಈ ಯೋಜನೆ ಯಾವ ಹಂತದಲ್ಲಿದೆ (ಗ್ರಾಮವಾರು ತಿಳಿಸಬೇಕಾಗಿ ವಿನಂತಿ)

ಇ) ಈ ಯೋಜನೆಗಳನ್ನು ಪೂರ್ಣಗೊಳಿಸುವ ಬಗ್ಗೆ ಸರ್ಕಾರದವರು ಕಾಲಾವಧಿಯನ್ನೇ ನಾದರೂ ನಿಗದಿ ಪಡಿಸಿದ್ದಾರೆಯೇ?

ಶ್ರೀ ಅಬ್ದುಲ್ ನಜೀರ್ ಸಾಬ್ (ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—ಮಂಜೂರಾತಿ ಪಡೆದ ಯೋಜನೆಗಳ ಪಟ್ಟಿಯನ್ನು ಲಗತ್ತಿಸಿದೆ (ಎ)

ಫಲಕಾರಿಯಾದ ಯೋಜನೆಗಳ ಹಾಗೂ ವಿವಿಧ ಹಂತದಲ್ಲಿರುವ ಯೋಜನೆಗಳ ವಿವರಗಳ ಪಟ್ಟಿಗಳನ್ನು ಲಗತ್ತಿಸಿದೆ (ಬಿ–ಸಿ)

೧೯೮೫–೮೬ನೇ ವರ್ಷದಲ್ಲಿ ೧ ರಾಷ್ಟ್ರೀಯ ಮತ್ತು ೩ ತ್ವರಿತ ಗ್ರಾಮಾಂತರ ನೀರು ಸರಬರಾಜು ಯೋಜನೆಗಳ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲು ನಿಗದಿ ಪಡಿಸಲಾಗಿದೆ. ಉಳಿದ ಯೋಜನೆಗಳ ನಿರ್ಮಾಣ ಕಾರ್ಯವನ್ನು ೧೯೮೬–೮೭ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗುತ್ತದೆ.

'ಎ'

ಅ) ಚಿಂತಾಮಣಿ ತಾಲ್ಲೂಕಿನಲ್ಲಿ ಗ್ರಾಮಾಂತರ ನೀರು ಸರಬರಾಜು ಯೋಜನೆಯು ಅನ್ವಯ ಮಂಜೂರಾತಿ ಪಡೆದಿರುವ ಗ್ರಾಮಗಳ ಪಟ್ಟಿ.

೧. ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆಯ ಅನ್ವಯ:

ಸಂಖ್ಯೆ	ಗ್ರಾಮದ ಹೆಸರು	ಆಡಳಿತಾತ್ಮಕ ಮಂಜೂರಾತಿ ದೊರೆಯಲ್ಪಟ್ಟ ದಿನಾಂಕ	ತಾಂತ್ರಿಕ ಮಂಜೂರಾತಿ ನೀಡಲ್ಪಟ್ಟ ದಿನಾಂಕ	ಅಂದಾಜು ಮೊತ್ತ ಷರಾ
೧	೨	೩	೪	೫
೧	ಕೈವಾರ	—	—	—
೨	ಮೈಜಕೂರು	ಡಿ.ಪಿ.ಸಿ ೨೦೫ ವಿ.ಆರ್. ಡಬ್ಲ್ಯೂ ೬೬ ತಾ ೧೭-೧-೧೯೬೭	—	—
೩	ಮೂಡಿಕೆರೆ	ಡಿ.ಪಿ.ಸಿ. ೨೩೩ ವಿ.ಆರ್.ಡಬ್ಲ್ಯೂ ೬೬ ತಾ ೧೦-೨-೧೯೬೭	—	—
೪	ಬಟ್ಲಹಳ್ಳಿ	ಡಿ ಪಿ.ಸಿ. ೬೩ ವಿ.ಆರ್ ಡಬ್ಲ್ಯೂ ೬೬ ತಾ ೧೦-೨-೬೭	—	—
೫	ಕೈವಾರ (ಸುಧಾರಣಾ ಯೋಜನೆ)	ಡಿ.ಪಿ.ಸಿ ೪೩ ವಿ.ಆರ್.ಡಬ್ಲ್ಯೂ ತಾ ೮-೪-೧೯೭೧	—	—
೬	ಮಾಟೇನಹಳ್ಳಿ	ಡಿ.ಪಿ.ಸಿ. ೧೫೦ ವಿಆರ್‌ಡಬ್ಲ್ಯೂ ೭೪ ತಾ ೯-೫-೧೯೭೪	ಇ.ಆ.ಸಂ. ೧೬ ——— ೭೪-೭೫	೦.೪೧೫
೭	ಇರಗಮ್‌ಪಲ್ಲಿ	ಡಿ.ಪಿ.ಸಿ ೮೭ ವಿಆರ್‌ಡಬ್ಲ್ಯೂ ೭೦ ತಾ ೧೩-೭-೧೯೭೦	ಎಸ್.ಇ.ಸಂ. ೨೬ ——— ೭೦-೭೧	೦.೫೨೧
೮	ರಗುಟ್ಟಹಳ್ಳಿ	ಡಿ.ಪಿ.ಸಿ ೮೭ ವಿಆರ್‌ಡಬ್ಲ್ಯೂ ೭೭ ತಾ ೨೮-೧೦-೧೯೭೦	ಎಸ್ ಇ ೫೦ ——— ೭೦-೭೧	೦.೬೦೦

೧	೨	೩	೪	೫
೯	ಊಲವಾಡಿ	ಆರ್‌ಡಿಸಿ ೧೪೬ ವಿಆರ್‌ಡಬ್ಲ್ಯೂಕೆ ೭೭ ತಾ ೨೧-೬-೧೯೭೭	ಎಸ್.ಇ.ಸಂ ೨೫ ——— ೭೭-೭೮	೦.೬೨೦
೧೦	ಜುಂಜನಹಳ್ಳಿ ನರಮಾಕಲಹಳ್ಳಿ	ಡಿಪಿಸಿ ೬೦ ವಿಆರ್‌ಡಬ್ಲ್ಯೂಕೆ ೭೧ ತಾ ೨೫-೩-೧೯೭೧	ಎಸ್.ಇ.ಸಂ ೩೪ ——— ೭೧-೭೨	೦.೫೭೫
೧೧	ಬುರುಡುಗುಂಟಿ	ಆರ್‌ಡಿಸಿ ೩೯೮ ವಿಆರ್‌ಡಬ್ಲ್ಯೂಕೆ ೭೯ ತಾ ೧೩-೩-೧೯೭೯	ಎಸ್.ಇ.ಸಂ ೦೪ ——— ೭೭-೭೮	೧.೮೬೦
೧೨	ಜಿ. ಕೋಡಿಹಳ್ಳಿ	ಆರ್‌ಡಿಸಿ ೯೮ ವಿಆರ್‌ಡಬ್ಲ್ಯೂಕೆ ೮೦ ತಾ ೨೫-೧೦-೧೯೮೦	ಎಸ್.ಇ.ಸಂ. ೬೦ ——— ೨-೨-೮೧	೧.೬೨೦
೧೩	ಮಿಂಡಿಗಲ್	ಆರ್‌ಡಿಸಿ ೧೫೮ ವಿಆರ್‌ಡಬ್ಲ್ಯೂಕೆ ೮೧ ತಾ ೩೧-೩-೧೯೮೨	ಎಸ್.ಇ.ಸಂ ೯೭ ——— ೧೪-೧೦-೮೨	೧ ೫೭೦
೧೪	ಜಿಲ್ಲಾಂಡಲಹಳ್ಳಿ	ಆರ್‌ಡಿಸಿ ೧೫೮ ವಿಆರ್‌ಡಬ್ಲ್ಯೂಕೆ ೮೧ ತಾ ೩೧-೩-೮೨	ಎಸ್.ಇ. ೧೨೫ ——— ೧೩-೧೨-೮೨	೧.೫೦೦
೧೫	ಮುದ್ದಾಲಹಳ್ಳಿ ನಿಂಬಾಕಲಹಳ್ಳಿ	ಆರ್‌ಡಿಸಿ ೧೫೮ ವಿಆರ್‌ಡಬ್ಲ್ಯೂಕೆ ೮೧ ತಾ ೩೧-೩-೧೯೮೨	ಅಂದಾಜು ಪಟ್ಟಿಗೆ ಮಂಜೂರಾತಿ ದೊರೆತಿಲ್ಲ	—
೧೬	ಜುಂಜನಹಳ್ಳಿ ಸುಧಾರಣಾ ಯೋಜನೆ)	ಆರ್‌ಡಿಸಿ ೪೩೩ ವಿಆರ್‌ಡಬ್ಲ್ಯೂಕೆ ೮೨ ತಾ ೧೮-೧೧-೧೯೮೨	ಎಸ್.ಇ ಸಂ ೭ ೩೦-೪-೮೩	೧.೯೪೦
೧೭	ತಲಗಾವರಂ (ಸುಧಾರಣಾ ಯೋಜನೆ)	ಆರ್‌ಡಿಸಿ ೪೩೩ ವಿಆರ್‌ಡಬ್ಲ್ಯೂಕೆ ೮೨ ತಾ ೧೮-೧೧-೮೨	ಎಸ್.ಇ.ಸಂ ೧೫೮ ೯-೩-೮೩	೧.೯೯೦
೧೮	ಕೈವಾರ (ಸುಧಾರಣಾ ಯೋಜನೆ)	ಆರ್‌ಡಿಸಿ ೩೨೮ ವಿಆರ್‌ಚಬ್ಲ್ಯೂಕೆ ೮೩ ತಾ ೨೦-೫-೮೩	ಅಂದಾಜು ಪಟ್ಟಿಗೆ ಮಂಜೂರಾತಿ ದೊರೆತಿಲ್ಲ	

ತ್ವರಿತ ಗ್ರಾಮಾಂತರ ನೀರು ಸರಬರಾಜು ಯೋಜನೆಯ ಅನ್ವಯ:

ಸಂಖ್ಯೆ	ಗ್ರಾಮದ ಹೆಸರು	ಆಡಳಿತಾತ್ಮಕ ಮಂಜೂರಾತಿ ದೊರೆತ ದಿನಾಂಕ	ತಾಂತ್ರಿಕ ಮಂಜೂರಾತಿ ದೊರೆತ ದಿನಾಂಕ	ಅಂದಾಜು ಮೊತ್ತ ಷರಾ
೧	೨	೩	೪	೫
೧	ಕುರುಬೂರು	ಆರ್‌ಡಿಸಿ ೪೬೮ ವಿಆರ್‌ಡಬ್ಲ್ಯೂಕೆ ತಾ ೧೮-೩-೭೮	ಎಸ್.ಇ.ಸಂ ೧೪೦ ೭೭-೭೮	೦.೭೫೫
೨	ಮುರುಗಮಲ್ಲ	ಆರ್‌ಡಿಸಿ ೧೫೮ ವಿಆರ್‌ಡಬ್ಲ್ಯೂಕೆ ೮೧ ತಾ ೧೬-೯-೮೧	ಸಿ.ಇ.ಸಂ ೨೫೫ ೮೨-೮೩	೩.೩೪೦
೩	ಚನ್ನಸಂದ್ರ	ಆರ್‌ಡಿಸಿ ೧೫೮ ವಿಆರ್‌ಡಬ್ಲ್ಯೂಕೆ ೮೧ ತಾ ೧೬-೯-೮೧	ಸಿ.ಇ.ಸಂ ೨೪೧ ೮೨-೮೩	೨.೩೦೦
೪	ಸಂತೇಕಲ್ಲಹಳ್ಳಿ	ಆರ್‌ಡಿಸಿ ೯೨ ಡಿಡಬ್ಲ್ಯೂಡಬ್ಲ್ಯೂಕೆ ೭೯ ತಾ ೨೮-೧೧-೭೯	ಸಿ.ಇ.ಸಂ ೮೨ ೨೧-೨-೮೦	೨.೪೨೦

'ಬಿ'

ಆ) ಗ್ರಾಮಾಂತರ ನೀರು ಸರಬರಾಜು ಯೋಜನೆಯ ನಿರ್ಮಾಣ ಕಾರ್ಯ ಮುಕ್ತಾಯಗೊಂಡು ಫಲಕಾರಿಯಾಗಿರುವ ಗ್ರಾಮಗಳ ಹೆಸರು.

೧) ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆ ಅನ್ವಯ:

ಸಂಖ್ಯೆ	ಗ್ರಾಮದ ಹೆಸರು	ಅಂದಾಜು ಮೊಬಲಗು ಲಕ್ಷಗಳಲ್ಲಿ	ಖರ್ಚಾಗಿರುವ ಹಣದ ಮೊತ್ತ	ಯೋಜನೆಯನ್ನು ಗ್ರಾಮ ಪಂಚಾಯಿತಿಗೆ ಪಹಿಸಿ ಕೊಡಲ್ಪಟ್ಟ ದಿನಾಂಕ	ಷರಾ
೧	೨	೩	೪	೫	೬
೧	ಕೈವಾರ	೦.೪೪೦	...	...	
೨	ವೈಜಕೂರು	೦.೨೬೮		೧೮-೮-೧೯೬೯	
೩	ಮೂಡಿಕೆರೆ	೦.೩೭೦		೨೧-೮-೧೯೬೯	
೪	ಬಟ್ಲಹಳ್ಳಿ	೦.೫೨೦		೧೩-೬-೧೯೭೦	
೫	ಕೈವಾರ (ಸುಧಾರಣಾ ಯೋಜನೆ)	೧.೦೦೦		೩೧-೬-೧೯೭೩	
೬	ಮಾಟೇನಹಳ್ಳಿ	೦.೪೧೫		೧೬-೧೧-೧೯೭೭	
೭	ಇರಗಮ್ಮಪಲ್ಲಿ	೦.೪೬೦	೪೬೧೦೪	೧೫-೩-೧೯೫೦	
	ರಗುಟ್ಟಹಳ್ಳಿ	೦.೬೦೦		೧೦-೮-೧೯೭೪	
೯	ಊಲವಾಡಿ	೦.೬೨೦	೧೦೦೬೩೭	—	
೧೦	ಜುಂಜನಹಳ್ಳಿ ನರಮಾಕನಹಳ್ಳಿ	೦.೫೫೫		೧೯-೧೨-೧೯೭೪	
೧೧	ಜುರುಡುಗುಂಟೆ	೧.೪೬೦	೧೯೫೭೪೯	೫-೫-೧೯೪೨	
೧೨	ಜಿ. ಕೋಡಿಹಳ್ಳಿ	೧.೬೨೦	೧೧೧೫೭೩	೧೧-೧೯೪೨	

೨) ತ್ವರಿತ ಗ್ರಾಮಾಂತರ ನೀರು ಸರಬರಾಜು ಯೋಜನೆ ಅನ್ವಯ:

೧)	ಕುರುಬೂರು	೦.೭೫೫	೧೩೩೫೪೪೮	೯-೬-೧೯೪೨

'ಸಿ'

ಆ (೨) ಚಿಂತಾಮಣಿ ತಾಲ್ಲೂಕಿನಲ್ಲಿ ಇತರೆ ಗ್ರಾಮಗಳಲ್ಲಿ ಕುಡಿಯುವ ನೀರಿನ ಯೋಜನೆಯ ಪ್ರಸ್ತುತ ಹಂತ.

೧) ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆ ಅನ್ವಯ:

ಸಂಖ್ಯೆ	ಗ್ರಾಮದ ಹೆಸರು	ನಿರ್ಮಾಣ ಕಾರ್ಯದ ಹಂತ	ಷರಾ
೧	೨	೩	೪
೧	ಮಿಂಡಿಗಲ್	ಜಲದ ಮೂಲವನ್ನು ನಿರ್ಧರಿಸಲಾಗಿದ್ದು ಟೆಂಡರುಗಳನ್ನು ಕರೆಯಲಾಗಿದೆ.	
೨	ಜಿಲ್ಲಾಂಡನಹಳ್ಳಿ	ಕೊಳವೆ ಬಾವಿ ತೋಡಲ್ಪಟ್ಟಿದೆ. ರೈಸಿಂಗ್ ಮೈನ್ ಪಂಪಿನ ಮನೆ ಇತ್ಯಾದಿ ಇವುಗಳ ಕಾರ್ಯಗಳು ಪ್ರಗತಿಯಲ್ಲಿದೆ.	
೩	ಮುದ್ದಾಲಹಳ್ಳಿ ನಿಂಬಾಕಲಹಳ್ಳಿ	ಅಂದಾಜು ಪಟ್ಟಿಗೆ ಮಂಜೂರಾತಿ ದೊರೆಯಬೇಕಾಗಿದೆ. ಜಲಮೂಲವನ್ನು ನಿರ್ಧರಿಸಬೇಕಾಗಿದೆ.	
೪	ಜುಂಜನಹಳ್ಳಿ (ಸುಧಾರಣಾ ಯೋಜನೆ)	ಗುತ್ತಿಗೆ ನೀಡಲಾಗಿದ್ದು ನಿರ್ಮಾಣ ಕಾರ್ಯ ಪ್ರಾರಂಭವಾಗಬೇಕಾಗಿದೆ.	
೫	ತಲಗಾವರ (ಸುಧಾರಣಾ ಯೋಜನೆ)	ಕೊಳವೆ ಬಾವಿ ಕೊರೆಯಲಾಗಿದೆ. ಗುತ್ತಿಗೆ ನೀಡಲಾಗಿದೆ ನಿರ್ಮಾಣ ಕಾರ್ಯ ಪ್ರಾರಂಭವಾಗಬೇಕಾಗಿದೆ.	
೬	ಕೈವಾರ (ಸುಧಾರಣಾ ಯೋಜನೆ)	ಯೋಜನೆಯು ಅಂದಾಜು ಪಟ್ಟಿಗೆ ಮಂಜೂರಾತಿ ದೊರೆಯಬೇಕಾಗಿದೆ.	
	೨) ತ್ವರಿತ ಗ್ರಾಮಾಂತರ ಯೋಜನೆಯ ಅನ್ವಯ		
೧	ಮುರುಗವಲ್ಲ	ಕೊಳವೆ ಬಾವಿ ಕೊರೆಯಲ್ಪಟ್ಟಿದ್ದು ಗುತ್ತಿಗೆ ನೀಡಲಾಗಿದೆ. ಇತರ ಕಾರ್ಯಗಳು ಪ್ರಾರಂಭವಾಗಿದೆ.	
೨	ಚಿನ್ನಸಂದ್ರ	–,,–	
೩	ಸಂತೇಕಲ್ಲಹಳ್ಳಿ	ಮೇಲ್ಮಟ್ಟದ ತೊಟ್ಟಿಯನ್ನು ಬಿಟ್ಟು ಉಳಿದ ಕಾರ್ಯಗಳು ಮುಕ್ತಾಯ ಗೊಂಡಿದೆ.	ಯೋಜನೆಯನ್ನು ಕಾರ್ಯಾರಂಭಗೊಳಿಸಲಾಗಿದೆ.

(೫) ಕೆಳಕಂಡ ಯೋಜನೆಗಳನ್ನು ೧೯೮೩-೮೪ರಲ್ಲಿ ಪೂರ್ಣಗೊಳಿಸಲು ಕಾಲಾವಧಿಯನ್ನು ನಿಗದಿಪಡಿಸಲಾಗಿದೆ.

ಸಂಖ್ಯೆ	ಗ್ರಾಮದ ಹೆಸರು	ಯೋಜನೆಯನ್ನು ಮುಕ್ತಾಯ ಗೊಳಿಸಲು ನಿಗದಿ ಪಡಿಸಿರುವ ದಿನಾಂಕ	ಷರಾ
೧	೨	೩	೪
೧	ಜಿಲ್ಲಾಂಡಲಹಳ್ಳಿ	ಫೆಬ್ರುವರಿ ೧೯೮೪	
೨	ಸಂತೇಕಲ್ಲಹಳ್ಳಿ	ಆಗಸ್ಟ್ ೧೯೮೩	
೩	ಮುರುಗವಲ್ಲ	ಅಕ್ಟೋಬರ್ ೧೯೮೩	
೪	ಚಿನ್ನಸಂದ್ರ	ಜನವರಿ ೧೯೮೪	

ಶ್ರೀ ಚೌಡರೆಡ್ಡಿ.—ಮಾನ್ಯ ಅಧ್ಯಕ್ಷರೇ ನಮ್ಮ ಕ್ಷೇತ್ರವಾದ ಚಿಂತಾಮಣಿಯ ಪಕ್ಕದಲ್ಲಿ ಮುರುಗಮಲ ಎಂಬ ಒಂದು ದೊಡ್ಡ ದರ್ಗ ಇದೆ. ಆದರೆ ಅಲ್ಲಿಗೆ ಸುಮಾರು ಜನ ಬಂದು ಹೋಗುತ್ತಾರೆ. ಅಲ್ಲಿಗೆ ಮಾನ್ಯ ಮಂತ್ರಿಗಳು ಒಂದು ಕೊಳವೆ ಬಾವಿಯನ್ನು ಮಂಜೂರು ಮಾಡಿದ್ದಾರೆ. ಆದರೆ ಅಲ್ಲಿ ಇದುವರೆಗೂ ಕೂಡ ಯಾವ ಕೆಲಸ ಆಗಿಲ್ಲ. ಅದಕ್ಕೆ ಮಾನ್ಯ ಮಂತ್ರಿಗಳು ಏನು ಉತ್ತರ ಕೊಡುತ್ತಾರೆ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೇ, ಕೊಳವೆ ಬಾವಿಗಳನ್ನು ತೋಡಿಸಿ ಕೊಡಬೇಕೆಂಬುದು ಸರ್ಕಾರದ ಉದ್ದೇಶ. ಆದರೆ ಕೆಲವಾರು ಕಾರಣಗಳಿಂದ ಅಲ್ಲಿ ಕೆಲಸ ಸ್ಥಗಿತ ಗೊಂಡಿದೆ. ಅಲ್ಲಿ ತೊಂದರೆಯಾಗಿದೆಯೆಂದು ಸರ್ಕಾರದ ಗಮನಕ್ಕೂ ಕೂಡ ಬಂದಿದೆ. ಆದರ ಬಗ್ಗೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಚೌಡರೆಡ್ಡಿ.—ಮಾನ್ಯ ಅಧ್ಯಕ್ಷರೇ, ನನ್ನ (ಇ) ಪ್ರಶ್ನೆಗೆ ಉತ್ತರವಾಗಿ ಮಾನ್ಯ ಮಂತ್ರಿಗಳು ಉತ್ತರ ಹೇಳಿದ್ದಾರೆ. ಅದು ಏನೆಂದರೆ ೧೯೮೩ರ ಆಕ್ಟೋಬರ್ ತಿಂಗಳ ಒಳಗೆ ಮುಗಿಸಿ ಕೊಡುತ್ತೇವೆಂದು ನಿಗದಿಪಡಿಸಿದ್ದಾರೆ. ಇನ್ನು ಕೇವಲ ಒಂದು ತಿಂಗಳು ಮಾತ್ರ ಇದೆ. ಆದರೆ ಅಲ್ಲಿ ಯಾವ ಕೆಲಸ ಕೂಡ ಆಗಿಲ್ಲ. ಆದ್ದರಿಂದ ಅಲ್ಲಿ ಯಾವಾಗ ಕೆಲಸ ಪ್ರಾರಂಭ ಮಾಡಿ ಮುಗಿಸಿ ಕೊಡುತ್ತೀರಿ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೇ ಈ ವರ್ಷದಲ್ಲಿ ಮುಗಿಸಿಕೊಡುತ್ತೇವೆ.

ಶ್ರೀ ಚೌಡರೆಡ್ಡಿ.—ಮಾನ್ಯ ಅಧ್ಯಕ್ಷರೇ, ನಮ್ಮ ಕ್ಷೇತ್ರದಲ್ಲಿ ನಿಮ್ಮಕಾಯಲಪಲ್ಲಿ ಎಂಬ ಒಂದು ಗ್ರಾಮ ಇದೆ. ಅಲ್ಲಿ ಕುಡಿಯುವ ನೀರು ಇಲ್ಲ. ಆದ್ದರಿಂದ ಅಲ್ಲಿಗೆ ಎನ್‌ಆರ್‌ಇಪಿ ಸ್ಕೀಮ್‌ನಲ್ಲಿ ನೀರನ್ನು ಒದಗಿಸಿಕೊಡಬೇಕೆಂದು ಕೇಳಿಕೊಂಡಿದ್ದೆವು. ಆದರೆ ಅಲ್ಲಿ ಇದುವರೆಗೂ ಯಾವ ಕ್ರಮವನ್ನು ತೆಗೆದುಕೊಂಡಿಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೇ ಎನ್‌ಆರ್‌ಇಪಿ ಪ್ರೋಗ್ರಾಂನಲ್ಲಿ ಕುಡಿಯುವ ನೀರು ಬೇಕೆಂದು ಅಗತ್ಯ ಕಂಡು ಬಂದರೆ ಮಾನ್ಯ ಸದಸ್ಯರು ನನಗೆ ಪತ್ರ ಬರೆದು ತಿಳಿಸಿದರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶಿಕಾರಿಪುರದಲ್ಲಿ ಸರ್ಕಾರಿ ಕಾಲೇಜಿಗೆ ಸ್ಥಳಾವಕಾಶ

೨೯೭ (೧೭೫) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಶಿಕಾರಿಪುರದಲ್ಲಿರುವ ಸರ್ಕಾರಿ ಕಿರಿಯ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಪಾಠ ಪ್ರವಚನಕ್ಕೆ ಕೊಠಡಿಗಳು ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಪುರಸಭೆಯಿಂದ ಸರ್ಕಾರದವರು ಈ ಶಾಲಾ ಕಟ್ಟಡವನ್ನು ವಹಿಸಿಕೊಂಡು ಇಲ್ಲಿಗೆ ಸುಮಾರು ೨೦-೨೫ ವರ್ಷಗಳಾಗಿದ್ದರೂ ಕೂಡ ಈವರೆಗೆ ಒಂದು ಕೊಠಡಿಯನ್ನು ಕಟ್ಟಿಸದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ತಕ್ಷಣ ಅಲ್ಲಿ ಕೊಠಡಿಗಳನ್ನು ಕಟ್ಟಿಸಲು ಸರ್ಕಾರದವರು ಏನಾದರೂ ನಿರ್ಧಾರ ಕೈಗೊಂಡಿದ್ದಾರೆಯೇ ?

ಶ್ರೀ ಬಿ. ರಾಚಯ್ಯ (ಮಾನ್ಯ ಶಿಕ್ಷಣ ಮಂತ್ರಿಗಳು).—

(ಅ) ಬಂದಿದೆ.

(ಆ) ಬಂದಿದೆ.

(ಇ) ೧೯೮೪-೮೫ರಲ್ಲಿ ಹೆಚ್ಚಿನ ಕೊಠಡಿಗಳ ನಿರ್ಮಾಣ ಸಾಧ್ಯವಾಗಬಹುದು.